ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಭಕ್ತಾದಿಗಳನ್ನು ಲೆಕ್ಕ ಹಾಕಿದರೆ, ಕರ್ನಾಟಕದಿಂದ ತಿರುಪತಿಗೆ ಹೋಗತಕ್ಕಂಥ ಭಕ್ತಾದಿಗಳ ಸಂಖ್ಯೆ ಬಹಳ ಜಾಸ್ತಿ ಇದೆ. ಆದರೆ ಇವತ್ತಿನವರೆಗೂ ಆ ಮಂಡಳಿಯಲ್ಲಿ ಕರ್ನಾಟಕದವರನ್ನು ನಾಮಕರಣ ಮಾಡಿಲ್ಲ. ಹಿಂದೆ ನಾಮಕರಣ ಮಾಡುತ್ತಿದ್ದರು. ಇವತ್ತು ಆ ಪದ್ಧತಿ ಇಲ್ಲ. ಆದ್ದರಿಂದ ಇದರ ಬಗ್ಗೆ ಆಂಧ್ರದ ಮುಖ್ಯಮಂತ್ರಿಗಳ ಜೊತೆಗೆ ತಾವು ದಯಮಾಡಿ ಮಾತನಾಡಬೇಕು. ನಮ್ಮವರನ್ನು ಮಂಡಲಿಯಲ್ಲಿ ನಾಮಕರಣ ಮಾಡಿಕೊಳ್ಳಬೇಕು.

ಶ್ರೀ ಜೆ.ಹೆಚ್. ಪಟೇಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳರ ಸಲಹೆಯಂತೆ ಇದರ ಬಗ್ಗೆ ಆಂಧ್ರದ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ ನಂತರ ಏನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಇಲ್ಲ...

ಅಧ್ಯಕ್ಷರು: ಅವರು ಆಂಧ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್: ಆಯಿತು, ಆಂಧ್ರದ ಮುಖ್ಯಮಂತ್ರಿಗಳ ಜೊತೆ ತಾವು ಮಾತನಾಡಿ. ನಮ್ಮದು ಮೊದಲನೆಯ ಪೂಜೆ ಆಗಬೇಕೆಂದು ಇತಿಹಾಸದಲ್ಲಿ ಇದೆ. ಅದನ್ನು ತಾವು ದಯಮಾಡಿ ಮಾಡಬೇಕು.

ಶ್ರೀಮತಿ ಬಿ.ಟಿ. ಲಲಿತಾನಾಯಕ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಮಾತನಾಡುತ್ತೇನೆ. ಅಲ್ಲಿ ಕಳ್ಳರು ಇದ್ದಾರೆ ಎಚ್ಚರಿಕೆ ಎಂದು ಇದೆ. ಆದ್ದರಿಂದ ಮೊದಲು ದೇವರು, ಪೂಜಾರಿ ಬಿಟ್ಟು ದಯವಿಟ್ಟು ಅಲ್ಲಿ ಕಳ್ಳಲು ಇಲ್ಲದ ಹಾಗೆ ಮಾಡಬೇಕು. ಅಲ್ಲಿ ಹೋಗುವವರು ಬರುವವರು ಜೇಬು ಕತ್ತರಿಸುತ್ತಾರೆ.

ಬಹುಮಹಡಿ ಕಟ್ಟಡದ ಒಳ ಇರುವ ಶ್ರೀ ರಾಮಾಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಖಾಲಿ ಇರುವ ಜಾಗ

113 (817) ಶ್ರೀ ಎನ್. ರಾಜಣ್ಣ (ಭಾರತೀ ನಗರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಖಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಹುಮಹಡಿ ಕಟ್ಟಡದ ಬಳಿ ಇರುವ ಖಾಲಿ ಜಾಗ ಮತ್ತು ಶ್ರೀರಾಂಜನೇಯಸ್ವಾಮಿ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲಿ ಭೂಮಿಯ ವಿಸ್ತೀರ್ಣ?

ಇ) ಮುಜರಾಯಿ ಇಲಾಖೆಯ ಕಛೇರಿಗೆ ಶಾಶ್ವತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರವು ಪರಿಶೀಲಿಸುತ್ತಿದೆ ಪ್ರಸ್ತುತ ಅದನ್ನು ಮಾರಕಟ್ಟೆಯಂತೆ ಉಪಯೋಗಿಸಲಾಗುತ್ತಿದೆಯೇ;

ಶ್ರೀ ಸಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) ಹೌದು.

ಆ) 25,803-53 ಚದರ ಅಡಿಗಳು

ಇ) ಈ ಸ್ಥಳವನ್ನು ಕೆಲವು ಬೀಧಿ ವ್ಯಾಪಾರಿಗಳನ್ನು ಉಚ್ಚಾಟಿಸುವ ಬಗ್ಗೆ ಪ್ರಕರಣ ಉಚ್ಚ ನ್ಯಾಯಾಲಯದ ಮುಂದಿದೆ ನ್ಯಾಯಾಲಯದ ಪ್ರಕರಣಗಳು ಇತ್ಯರ್ಥವಾದ ನಂತರ ಮುಜರಾಯಿ ಇಲಾಖೆಯ ಕಟ್ಟಡ ಕಟ್ಟುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೆ, ವಿಧಾನಸೌಧದಿಂದ 100 ಮೀಟರ್ ದೂರದಲ್ಲಿ 25, 803-53 ಚದರ ಅಡಿಗಳು ಜಾಗ ಇದ್ದು, ಅದು ಈಗ ಒಂದು ವಾಣಿಜ್ಯ ವ್ಯಾಪಾರ ಸ್ಥಳವಾಗಿದೆ. ಅದಕ್ಕೆ ಎಷ್ಟು ಕೋಟಿ ರೂಪಾಯಿ ಆಗಬಹುದು? ಅಲ್ಲಿ ವಾಣಿಜ್ಯ ವ್ಯಾಪಾರ ಸ್ಥಳ ಮಾಡಲಿಕ್ಕೆ ಯಾರು ಕಾರಣ? ಅಲ್ಲಿ ವ್ಯಾಪಾರ ಸ್ಥಳ ಮಾಡಲಿಕ್ಕೆ ಇಷ್ಟು ದಿವಸ ಏಕೆ ಬಿಟ್ಟರು? ಈಗ ಅಲ್ಲಿ ವ್ಯಾಪಾರ ಮಾಡತಕ್ಕಂಥವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆಂದು ಉತ್ತರದಲ್ಲಿ ಹೇಳಿದ್ದಾರೆ. ಈ ಇಲಾಖೆಯ ಅಧಿಕಾರಿಗಳು ಕೇವಿಯೆಟ್ ಹಾಕಿ ಏಕೆ ತಡೆ ಮಾಡಲಿಲ್ಲ? ಅಲ್ಲಿ ವ್ಯಾಪಾರ ಮಾಡತಕ್ಕಂಥವರು ಸ್ಟೇ ತೆಗೆದುಕೊಂಡು ಬಂದಿರುವುದನ್ನು ಸ್ಪೆಷಲ್ ಅಪ್ಲಿಕೇಶನ್ ಹಾಕಿ ಏತಕ್ಕೆ ವೇಕೆಟ್ ಮಾಡಿಸಲಿಲ್ಲ ಇದರಿಂದ ಎಷ್ಟೊಂದು ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಹಿಂದೆ ಕಂದಾಯ ಮಂತ್ರಿಗಳು ಈ ಜಾಗದಲ್ಲಿ ಒಂದು ಕಟ್ಟಡ ಕಟ್ಟಿ ಅಲ್ಲಿಗೆ ಮುಜರಾಯಿ ಇಲಾಖೆ ಪೂರ್ತಿಯಾಗಿ ಬರಬೇಕೆಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದುರಲ್ಲವೆ? ಏಕೆ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಕಟ್ಟಡ ಅಲ್ಲಿ ಬರಲಿಲ್ಲ?

ಶ್ರೀ ಬಿ. ಮುನಿಯಪ್ಪ: ಮುದ್ದಪ್ಪ: ಮಾನ್ಯ ಅಧ್ಯಕ್ಷರೆ ಇಲ್ಲಿ 25,803-53 ಚದರ ಅಡಿಗಳು ಇದ್ದದ್ದು ನಿಜ. ಆದರೆ ಅಲ್ಲಿ ಪದವೀಧರ ನಿರುದ್ಯೋಗಿಗಳು ಸಣ್ಣಪುಟ್ಟ ವ್ಯಾಪಾರ ಮಾಡಿಕೊಳ್ಳಲಿಕ್ಕೆ ಇದ್ದುದರಿಂದ, ಅದು ನಮ್ಮ ಗಮನಕ್ಕೆ ಬಂದ ಮೇಲೆ ನಾವು ಅವರನ್ನು ಅಲ್ಲಿಂದ ಬಿಡಿಸಲು ಪ್ರಯತ್ನಿಸಿದಾಗ ಅವರು ಕೋರ್ಟಿಗೆ ಹೋದರು ಮತ್ತು ಕೋರ್ಟಿನಲ್ಲಿ ಸ್ಟೇ ಇದೆ. ಮತ್ತು 20 ಜನರಿಗೆ 5 ಅಡಿ 5 ಅಡಿ ರೀತಿಯಲ್ಲಿ ಕೊಡಬೇಕೆಂದು ಅವರ ಆದೇಶ ಆಗಿದೆ ಉಳಿದವರಿಗೆ ಯಾರಿಗೂ ಜಾಗ ಕೊಡಕೂಡದೆಂದು ಆದೇಶ ಆಗಿದೆ. ಅದು ಇಷ್ಟರಲ್ಲಿಯೇ ತೀರ್ಮಾನ ಆದ ಮೇಲೆ ನಾವು ಅಲ್ಲಿ ಕಟ್ಟಡ ಕಟ್ಟಲಿಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎನ್ನುತಕ್ಕ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು: ಕೋರ್ಟ್ ವ್ಯವಹಾರ ಯಾವ ಹಂತಕ್ಕೆ ಬಂದು ತಲುಪಿದೆ? ಸ್ಟೇ ಕೊಟ್ಟು ಎಷ್ಟು ದಿವಸ ಆಯಿತು?.... ಅವರು ಕೇಳುತ್ತಿರುವುದೇನೆಂದರೆ ಸ್ಟೇ ಕೊಟ್ಟು ಎಷ್ಟು ದಿವಸ ಆಯಿತು? ಆ ಸ್ಟೇ ಯನ್ನು ವೇಕೆಟ್ ಮಾಡಲಿಕ್ಕೆ ಇಷ್ಟು ದಿವಸ ಏಕೆ ಪ್ರಯತ್ನ ಮಾಡಲಿಲ್ಲ? ಎಂದು ಕೇಳುತ್ತಿದ್ದಾರೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ಮಾನ್ಯ ಅಧ್ಯಕ್ಷರೆ, ಅದಕ್ಕೆ ವಿವರವಾದ ಉತ್ತರವನ್ನು ಒದಗಿಸಿದ್ದೇನೆ. ಮೊದಲನೆಯದಾಗಿ ಅಲ್ಲಿಯ ಪದವೀಧರ ನಿರುದ್ಯೋಗಿಗಳು ಕೋರ್ಟಿಗೆ 8-3-1993ರಲ್ಲಿ ಹೋದರು. ಆ ಮೇಲೆ 20-7-1993ರ ಆದೇಶ ಮುಂದುವರೆಸಿ ಒಂದು

ರೂಲಿಂಗ್ ನೀಡಿತು, ಸರ್ಕಾರದ ಪರವಾಗಿ ಎನ್ನತಕ್ಕಂಥದ್ದು ಸಹಿತ ಅವರಿಗೆ ಎಲ್ಲಾ ವಿವರವಾಗಿ ನೀಡಿದ್ದೇನೆ. ಮುಂದೆ ಇಷ್ಟರೊಳಗೆ ಅದು ತೀರ್ಮಾನವಾಗುತ್ತದೆ. ಆ ಮೇಲೆ ಕಟ್ಟಡ ಕಟ್ಟಲಿಕ್ಕೆ ನಾವು ಪ್ರಯತ್ನ ಪಡುತ್ತೇವೆ.

SRI RAJANNA: Sir it is very costly place. I request the Government through you to see that the Government takes immediate action, remove the small vendors and protect that property and see that the builiding is protected for the use of the Government.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ಮಾನ್ಯ ಅಧ್ಯಕ್ಷರೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಬಾಡಿಗೆ ನಿಯಂತ್ರಣ ಕಾಯಿದೆ ಬಗ್ಗೆ

114 (848) ಶ್ರೀ ಶಿವಾನಂದ ಎಸ್. ಪಾಟೀಲ (ತಿಕೋಟಾ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಡಿಗೆ ನಿಯಂತ್ರಣ ಕಾಯಿದೆಯ ಕೆಲವು ಉಪಬಂಧಗಳನ್ನು ತೆಗೆದು ಹಾಕಿರುವುದರಿಂದ ಕೆಳ ಹಾಗೂ ಮಧ್ಯಮ ವರ್ಗದ ಜನರಿಗೆ ನಗರದಲ್ಲಿ ಬಾಡಿಗೆ ಮನೆ ಪಡೆಯುವಲ್ಲಿ ಆಗುತ್ತಿರುವ ತೊಂದರೆಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಸಾಕಷ್ಟು ಬಡತನದಿಂದಲೇ ಬದುಕುತ್ತಿರುವ ಜನರಿಗೆ ಯೋಗ್ಯವಾದ ಬೆಲೆಯಲ್ಲಿ ಬಾಡಿಗೆ ಮನೆ ಸಿಗುವ ಹಾಗೆ ಮತ್ತೆ ಈ ಉಪಬಂಧಗಳನ್ನು ಜಾರಿಗೆ ತರಲು ಸಾಧ್ಯವಿಲ್ಲವೆ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬ ಕಾರಣಕ್ಕಾಗಿಯೇ ಬಾಡಿಗೆ ನಿಯಂತ್ರಣ ಕಾಯಿದೆಯ ಉಪಬಂಧ 4, 5 ಮತ್ತು 10 ಎ ಗಳನ್ನು ಕೆಲವು ನಗರ ಪ್ರದೇಶಗಳಲ್ಲಿ ಸ್ಥಗಿತಗೊಳಿಸಲಾಗಿದೆ. ಕೇಂದ್ರ ಸರ್ಕಾರವು ರೂಪಿಸಿರುವ ಮಾದರಿ ಬಾಡಿಗೆ ನಿಯಂತ್ರಣ ಕಾಯಿದೆ ಆಧಾರದ ಮೇಲೆ ಹೊಸ ಬಾಡಿಗೆ ನಿಯ್ತುರಣ ಕಾಯಿದೆಯನ್ನು ರಾಜ್ಯದಲ್ಲಿ ಜಾರಿಗೆ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) 'ಅ' ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ: ಮಾನ್ಯ ಅಧ್ಯಕ್ಷರೆ, ಬಾಡಿಗೆ ನಿಯ್ತುರಣ ಕಾಯಿದೆಯ ಉಪಬಂಧ (4) (5) ಮತ್ತು 10 (ಎ) ಗಳನ್ನು ಕೆಲವು ನಗರ ಪ್ರದೇಶಗಳಲ್ಲಿ ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದ್ದಾರೆ., ಯಾವ ಯಾವ ನಗರ ಪ್ರದೇಶಗಳು ಎಂಬುದನ್ನು ಹೇಳಬೇಕು. ಇನ್ನು ಈ ಬಾಡಿಗೆ ನಿಯ್ತುರಣ ಕಾಯಿದೆಯ ಆಧಾರದ ಮೇಲೆ ಹೊಸ ಬಾಡಿಗೆ ನಿಯ್ತುರಣ ಕಾಯಿದೆಯನ್ನು ರಾಜ್ಯದಲ್ಲಿ ಜಾರಿಗೆ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಈ ಹೊಸ